**ವ್ಯಾಖ್ಯಾನ**

# ಆವಾವ ಯುಗದಲ್ಲಿ ವಿಷ್ಣು ವ್ಯಾಪಕನಾಗಿ

ಉಗಾಭೋಗದ ಚಿಂತನೆ:

**ಆವಾವ ಯುಗದಲ್ಲಿ ವಿಷ್ಣು ವ್ಯಾಪಕನಾಗಿ**

**ವಿಷ್ಣು ಇದ್ದಲ್ಲಿ ವಿಷ್ಣು ಲೋಕಾಗಿಪ್ಪುದಾಗಿ**

**ಸಾಲೋಕ್ಯ, ಸಾರೂಪ್ಯ, ಸಾಮೀಪ್ಯ, ಸಾಯುಜ್ಯ,**

**ಸಾದೃಶ್ಯಂಗಳು ಪಂಚ ವಿಧ ಮುಕುತಿದಾಯಕ**

**ಭರಿತ ನಮ್ಮ ಪುರಂದರ ವಿಠಲ**

ಭಗವಂತನನ್ನು ವಿಷ್ಣು ಎಂದು ಕರೆಯಲು ಕಾರಣವೇನೆಂದರೆ --

ವಿಶಿಷ್ಟವಾದ ಪ್ರಾಣ ಮತ್ತು ಬಲ ಉಳ್ಳವನಾದ್ದರಿಂದ ಶ್ರೀಹರಿಯು ವಿಷ್ಣು ಶಬ್ದದಿಂದ ಕರೆಯಲ್ಪಡುವನು. ಏಕೆಂದರೆ, ಶ್ರುತಿಯು ಹೀಗೆ ಹೇಳುತ್ತದೆ --

**" ಣಕಾರೋ ಬಲಂ ಷಕಾರ:ಪ್ರಾಣ ಆತ್ಮಾ"**

**'ಣ'** ಕಾರಕ್ಕೆ ಬಲವೆಂದು ಅರ್ಥವು, **'ಷ'** ಕಾರಕ್ಕೆ ಪ್ರಾಣ ಎಂದರ್ಥವು. ಪ್ರಾಣ ಎಂದರೆ ಚೇಷ್ಟೆ(ವ್ಯಾಪಾರ, ಕ್ರಿಯೆ) ಎಂದು ತಿಳಿಯಬೇಕು.

ಇಂಥ ವಿಷ್ಣು ಸರ್ವತ್ರ ವ್ಯಾಪಕನಾಗಿದ್ದಾನೆ.

ಮತ್ತು ಅವನು ಎಲ್ಲ ಕಡೆಗೂ ದೋಷದೂರನಾಗಿ ಸರ್ವಗುಣ ಪೂರ್ಣನಾಗಿಯೇ ಇರುತ್ತಾನೆ.

**"ಚತುಷ್ಪಾತ್"** ಎನಿಸಿ, ತನ್ನ ದಿವ್ಯ ಸ್ವರೂಪದಿಂದ ಶ್ವೇತದ್ವೀಪ, ವೈಕುಂಠ ಮತ್ತು ಅನಂತಾಸನ ಲೋಕಗಳಲ್ಲಿ, ಮತ್ತು ತನ್ನಿಂದ ಭಿನ್ನವಾದ ಈ ಪ್ರಪಂಚದಲ್ಲಿ ಸದಾ ಇರುತ್ತಾನೆ.

ಅವನಿರುವ ಲೋಕಗಳು **ಮೋಕ್ಷ** ಎಂದು ಕರೆಸಿಕೊಳ್ಳುತ್ತವೆ.

**ಸಾಯುಜ್ಯ** – ಮುಕ್ತ ದೇವತೆಗಳು ಹರಿಯ ಅಂಗಗಳಲ್ಲಿರುವುದು.

**ಸಾಲೋಕ್ಯ** – ಶ್ರೀಹರಿಯ ಲೋಕಗಳಾದ ಅನಂತಾಸನಾದಿಗಳಲ್ಲಿರುವುದು,

**ಸಾಮೀಪ್ಯ --** ಈ ಮೂರೂ ಲೋಕದ ಸಮೀಪ ಕ್ಷೀರಸಾಗರ ಘನೋದಕ ಸಾಂತಾನಿಕ ಲೋಕಗಳಲ್ಲಿರುವುದು.

**ಸಾರೂಪ್ಯ & ಸಾದೃಶ್ಯ** -- ಈ ಮೂರೂ ಮುಕ್ತಿಗಳಿಂದ ಹೊರಗಿರುವವರಿಗೆ ಅಂದರೆ ಸತ್ಯ ಲೋಕಾದಿಗಳಲ್ಲಿರುವುದು.

ಸಾರೂಪ್ಯ ಮೋಕ್ಷ ಎಲ್ಲರಿಗೂ ಉಂಟು.

ಅಂದರೆ ಮುಕ್ತರೆಲ್ಲರಿಗೂ ಚತುರ್ಭುಜದವರಾಗಿರುತ್ತಾರೆ.

**"ಅತಃ ಸಾರೂಪ್ಯ ಮೋಕ್ಷೋಽಯಂ ಸರ್ವೇಽಪಿ ಯೋಗಿನಾಂ"** ಎಂದು ಶ್ರೀ ವಾದಿರಾಜರು 'ಯುಕ್ತಿ ಮಲ್ಲಿಕೆ' ಯಲ್ಲಿ ಹೇಳಿದ್ದಾರೆ.

**" ಸರ್ವೇ ಚತುರ್ಭುಜಾ ಉನ್ಮಿಷನ್ಮಣಿ ಪ್ರವೇಕ ನಿಷ್ಕಾರಣಾ: ಸುವರ್ಚಸಃ "**

- (ಎಲ್ಲ ಮುಕ್ತರೂ ಚತುರ್ಭುಜ ಉಳ್ಳವರು)

ಶ್ರೀಹರಿಯು ಚತುರ್ಮುಖನಿಗೆ ವೈಕುಂಠ ದರ್ಶನ ಮಾಡಿಸುವ ಸಂದರ್ಭದಲ್ಲಿಯ ಭಾಗವತದ ವಚನವಿದು.

ಎಲ್ಲ ಮುಕ್ತರಿಗೂ ಚತುರ್ಭುಜ ಸಾಮ್ಯವೆಂದರೆ ಹೇಗೆ?

ತೃಣಾದಿ ಜೀವರಿಗೆ ಹೇಗೆ?  ಅವರಿಗೆ ಕೈಕಾಲುಗಳಿಲ್ಲವಲ್ಲ? -- ಎಂಬ ಪ್ರಶ್ನೆ ಬಂದರೆ,

ಶ್ರೀಹರಿಯ ಮತ್ಸ್ಯಾದಿ ರೂಪಗಳಿಗೆ ಹೇಗೋ ಹಾಗೆ ಎಂದು ತಿಳಿಯಬೇಕು.

ಈ ರೀತಿ ತನ್ನ ಅಂಚಿತ್ಯ ಶಕ್ತಿಯಿಂದ ಜೀವರಿಗೆ ಮುಕ್ತಿಯಲ್ಲೂ ಅನುಗ್ರಹ ಮಾಡುವ ಪುರಂದರ ವಿಟ್ಠಲನ್ನು ಭಜಿಸಿರಿ ಎನ್ನುವುದು.  ಶ್ರೀ ಪುರಂದರ ದಾಸರ ಆಶಯ.

**ಶ್ರೀಕೃಷ್ಣಾರ್ಪಣಮಸ್ತು**

**ಲೇಖಕರು:** ಸೌ. ಚೇತನಾ ವಾಮಾನರಾವ ಕುಲಕರ್ಣಿ, ವಿಜಯಪುರ, ಕರ್ನಾಟಕ